SRI H. M. CHANNABASAPPA (Minister for Public Works and Electricity).—

(*a*) District Engineers 4.
Assistant Engineers 18.

(*b*) 4.

(*c*) 8.

(*d*) 7.

(*e*) Yes.

(*f*) No promotions have been made.

(*g*) The question of considering the claims of these Ex-D.L.B Engineers for promotion would arise only after the finalisation of the Graduation list which is under consideration.

ಶ್ರೀ ಗೋಪಿನಾಥ ಆರ್. ಸಾಂದ್ರ —ಸರಕಾರಕ್ಕೆ ಹೈಕೋರ್ಟಿನಿಂದ ಒಂದು ಆದೇಶ ಈ ಬಗ್ಗೆ ಬಂದಿದ್ದರೂ ಸಹ ಅದನ್ನು ಏತಕ್ಕೆ ಕಾರ್ಯರೂಪದಲ್ಲಿ ತರಲಿಲ್ಲ ?

ಶ್ರೀ ಹೆಚ್. ಎಂ. ಚನ್ನಬಸಪ್ಪ .—ಕಾರ್ಯರೂಪಕ್ಕೆ ತಂದಾಗಿದೆ ಎಂದು ಉತ್ತರದಲ್ಲಿಯೇ ನಮೂದು ಮಾಡಲಾಗಿದೆ.

ಶ್ರೀ ಪಿ. ಎಂ. ಭಂಗಿ : ಹೈಕೊರ್ಟು ಇದರ ಬಗೆ ತೀರ್ಮಾನ ಮಾಡಿದ್ದರೂ ಇನ್ನೂ ಇಂಟರ್ ಸೆ ೀಟ್ ಸೀನಿಯಾರಿಟಿ ಲಿಸ್ಟನ್ನು ಪ್ರಕ ಟಮಾಡದೇ ಇಷ್ಟು ತಡಮಾಡಲು ಕಾರಣಗಳೇನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ . ಹೈಕೊರ್ಟಿನಿಂದ ಬಂದಿರತಕ್ಕ ಲೋಕಲ್ ಸೆಲ್ಫ್ ಗವರ್ನಮೆಂಟ್ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಅನೇಕ ವಿಷಯಗಳನ್ನು ಪರಿಶೀಲನೆ ಮಾಡುವಾಗ ಸ್ವಲ್ಪ ಮಟ್ಟಿನ ತಡ ವಾಗುತ್ತದೆ. ಇದನ್ನೆಲ್ಲಾ ಪರಿಶೀಲಿಸುತ್ತಿದ್ದಾರೆ.

SMT. WINNIFRED FERNANDIS : Out of 18 Assistant Engineers you have promoted about 3 of them as Executive Engineers, What about the Executive Engineers ? Are you not going to promote them ?

SRI H. M. CHANNABASAPPA : They are not promoted for valid reasons.

ಶ್ರೀ ಗೋಪಿನಾಥ್ ಆರ್. ಸಾಂದ್ರ.—ಪ್ರಶ್ನೆಯ (ಜಿ)ಗೆ ಉತ್ತರವಾಗಿ ಈಗ ಪರಿಶೀಲನೆಯಲ್ಲಿರುವ ಶ್ರೇಣಿ ಸೂಚಿಯನ್ನು ಅಂತಿಮಗೊಳಿಸಿದ ನಂತರವೇ ಉದ್ಬವಿಸುವುದು ಎಂದು ಹೇಳಿದ್ದೀರಿ. ಇದು ಯಾವಾಗ ಆಗುತ್ತದೆ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ .—ಅತಿ ಶೀಘ್ರದಲ್ಲೇ ಆಗುತ್ತದೆ.

SHORT NOTICE QUESTION AND ANSWER
MISBEHAVIOUR OF POLICE OFFICER

4. SRI KONANDUR LINGAPPA (Thirthahalli).—

Will the Chief Minister be pleased to state :—

(*a*) the reason for not giving a reply so far to the letter written by Sri Veerendra Kumar, Leader of Kerala Socialist Party on 4th

October 1972 and to the letter written by our party on 8th October 1972 regarding the mis-behaviour of one Sri Sabarad, a Police Officer with me on 3rd October 1972 when the procession of the small land holders of coffee growers of Kerala came near the Coffee Board in Bangalore;

(*b*) the instructions issued by the Government about the concerned Police Officer in this behalf.

Sri S. M. Krishna (Minister for Industries) [on behalf of SRI D. DEVARAJ URS (Chief Minister)].—

(*a*) No reply to these letters was sent since the allegations contained therein against a Police Officer were under enquiry.

(*b*) As the allegations were reported to be baseless, no further action was considered necessary.

ಶ್ರೀ ಕೋಣಂದೂರು ಲಿಂಗಪ್ಪ.— ಇಲ್ಲಿ ವಾಸ್ತವಾಂಶ ಹೇಳಲಿಲ್ಲ. ಇದು ಸತ್ಯಾಂಶಕ್ಕೆ ದೂರವಾಗಿದೆ, ಇದು ವೈಯಕ್ತಿಕವಾಗಿ ನನಗೆ ಸಂಬಂಧಪಟ್ಟಿರುವುದರಿಂದ ನಾನು ಇದರ ಬಗ್ಗೆ ಯಾವ ಪ್ರಶ್ನೆಯನ್ನೂ ಹಾಕಲು ಇಷ್ಟಪಡುವುದಿಲ್ಲ ಮತ್ತು ಸರಕಾರದವರು ಇದಕ್ಕೆ ಯಾವ ಉತ್ತರಯನ್ನು ಕೊಡುವುದರ ಅವಶ್ಯಕತೆಯೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಪ್ರಶ್ನೆಯಲ್ಲಿ ೪–೧೦–೭೨ರ ಪತ್ರಕ್ಕೆ ಹಾಗೂ ೮–೧೦–೭೨ರಲ್ಲಿ ಬರೆದ ಪತ್ರಕ್ಕೆ ವಿಚಾರಣೆ ನಡೆಯುತ್ತಿದ್ದುದರಿಂದ ಉತ್ತರ ಕೊಟ್ಟಿಲ್ಲ ಎಂದು ಹೇಳಲಾಗಿದೆ, ಇದನ್ನು ಅವರಿಗೆ ಏಕೆ ತಿಳಿಸಲಿಲ್ಲ ?

†ಶ್ರೀ ಎಸ್. ಎಂ. ಕೃಷ್ಣ.—ಪತ್ರಗಳು ಬಂದ ತಕ್ಷಣವೇ ವಿಚಾರಣೆಯನ್ನು ನಡೆಸಲಾಯಿತು. ಮಾನ್ಯ ಸಭೆಯಲ್ಲಿ ಪ್ರತಿನಿಧಿಗಳಾಗಿರುವ ಒಬ್ಬ ಸದಸ್ಯರ ಪತ್ರ ಬಂದಕೂಡಲೇ ಇದರ ಬಗ್ಗೆ ಇಲಾಖೆಯವರು ರೂಲ್ಸಿಗನುಗುಣವಾಗಿ ವಿಚಾರ ನಡೆಸಿದಾಗ ಬಹುಶಃ ಆಗಿರತಕ್ಕ ಘರ್ಷಣೆಗಳು ಟೆಂಪರ್‌ಮೆಂಟಲ್ ಘರ್ಷಣೆ ಎಂದೂ ಮತ್ತು ಅವರೇನು ಆರೋಪ ಮಾಡಿದರು ಆ ಆರೋಪಣೆಯಲ್ಲಿ ಸತ್ವವಿರಲಿಲ್ಲ ಮತ್ತು ಇವರ ಪತ್ರ ಬಂದಾಗ ಇನ್ನೂ ವಿಚಾರಣೆ ನಡೆಯುತ್ತಿತ್ತು ಆ ವಿಚಾರಣೆಯಲ್ಲಿ ನಿರಾಧಾರವೆಂದು ತಿಳಿದು ಬಂದುದರಿಂದ ಅವರಿಗೆ ಯಾವ ಉತ್ತರವನ್ನೂ ಕೊಡಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕಾಫೀ ಮಂಡಲಿಯ ಬಳಿ ಕಾಫಿ ಬೆಳೆಯು ಸಣ್ಣ ಹಿಡುವಳಿದಾರರ ಪ್ರದರ್ಶನ ಬಂದಾಗ ಅಲ್ಲಿ ಇದ್ದ ಸಬರದ್ ಎನ್ನುವ ಪೋಲೀಸು ಅಧಿಕಾರಿಗಳು ಶ್ರೀ ಕೋಣಂದೂರು ಲಿಂಗಪ್ಪ ಹಾಗೂ ವೀರೇಂದ್ರಕುಮಾರ್‌ರವರು ಮತ್ತು ಇನ್ನೂ ಇತರ ಸೋಷಿಯಲಿಸ್ಟ್ ಪಕ್ಷದ ನಾಯಕರುಗಳು ಅಲ್ಲಿದ್ದರು, ಆಂತಹ ಸಂದರ್ಭದಲ್ಲಿ ಈ ಅಧಿಕಾರಿಗಳು ಬಹು ಉದ್ಧಟತನದಿಂದ ಹೇಳಿಂತ್ತಾ,

"Will you obey my orders or not" ಎನ್ನುವ ರೀತಿಯಲ್ಲಿ ಮಾತನಾಡಿ ಅವರಿಗೆ ಸರಕಾರದ ಅಧಿಕಾರಿಗಳು ಯಾವ ರೀತಿಯಾದ ಗೌರವವನ್ನು ಕೊಡಬೇಕೋ ಅದನ್ನು ಕೊಡದೇ ಇದ್ದುದರಿಂದ ಅವರು ಸರಕಾರಕ್ಕೆ ಪತ್ರ ಬರೆದು ಆದಮೇಲೆ ಇದರ ಬಗ್ಗೆ ಎನ್‌ಕ್ವೈರಿ ಮಾಡುವಾಗ ಅವರೂ ಒಬ್ಬರು ಎಂ. ಎಲ್. ಎ. ಆಗಿದ್ದುದರಿಂದ ಅವರನ್ನು ಕರಿಸಿ ವಿಚಾರಣೆ ಮಾಡಿದಿರಾ ಹೇಗೆ ? ಇಲ್ಲವೇ ಬರೀ ಡಿಪಾರ್ಟ್‌ಮೆಂಟ್ ಎನ್‌ಕ್ವೈರಿ ರೀತಿ ಮಾಡಿ ತೀರ್ಮಾನ ತೆಗೆದುಕೊಂಡರೆ ಹೇಗೆ ?

ಶ್ರೀ ಎಸ್. ಎಂ ಕೃಷ್ಣ.—ಈ ಪ್ರಶ್ನೆಯಲ್ಲಿ ಮುಖ್ಯವಾಗಿರುವುದು ಇಷ್ಟು. ಪ್ರದರ್ಶನ ಚಳುವಳಿ ಇಲ್ಲವೇ ಸತ್ಯಾಗ್ರಹ ನಡೆಸತಕ್ಕದ್ದು ಪ್ರಜಾಪ್ರಭುತ್ವದಲ್ಲಿ ಅವಶ್ಯಕವಾಗಿ ಬಂದಿರತಕ್ಕದು. ಆದುದರಿಂದ ಎಂತಹವರೇ ಆಗಲೀ ಇದರಲ್ಲಿ ಸೌಜನ್ಯ ಬೆಳಸಬೇಕು ಎನ್ನುವುದರ ಬಗ್ಗೆ ಎರಡು ಅಭಿಪ್ರಾಯಗಳಿಲ್ಲ, ಸರಕಾರದಿಂದ ನಿಯೋಜಿತವಾದ ಅಧಿಕಾರಿಗಳು ಸೌಜನ್ಯವನ್ನು ಪ್ರದರ್ಶಿಸಬೇಕು. ಯಾರೋ ಒಬ್ಬ ಅಧಿಕಾರಿಗಳು ಈ ಸದನದ ಪ್ರತಿನಿಧಿಗಳಿಗೆ ಸರಿಯಾಗಿ ಗೌರವ ಕೊಡಲಿಲ್ಲ ಎನ್ನುವುದೇ ಇದರ ಪ್ರಶ್ನೆ. ಆ ರೀತಿ ಆರೋಪ ಬಂದ ಕಾಲದಲ್ಲಿ ಆ ಆರೋಪಣೆಯನ್ನು ವಿಚಾರಣೆ ಮಾಡಿದ ಮೇಲೆ ಅದು ನಿರಾಧಾರವೆಂದು ಅವರಿಗೆ ಏನೂ ತಿಳಿಸಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಚಾರಣೆಯನ್ನು ಮಾಡುವಾಗ ಅವರೂ ಒಬ್ಬರು ಎಂಎಲ್ಎ ಆಗಿದ್ದುದರಿಂದ ಅವರನ್ನು ಕರೆದು ಅವರ ಹೇಳಿಕೆಯನ್ನೇನಾದರೂ ತೆಗೆದುಕೊಂಡರೇ ಹೇಗೆ ? ಇಲ್ಲವೇ ಡಿಪಾರ್ಟ್‌ಮೆಂಟ್ ರೂಲ್ಸ್ ಪ್ರಕಾರ ಮಾತ್ರ ವಿಚಾರಣೆ ಮಾಡಲಾಯಿತೇ ?

ಶ್ರೀ ಎಸ್. ಎಂ. ಕೃಷ್ಣ.—ಇದರ ಬಗ್ಗೆ ಡಿಪಾರ್ಟ್‌ಮೆಂಟ್ ರೂಲ್ಸ್‌ನ ಪ್ರಕಾರ ವಿಚಾರ ಮಾಡಿರುವುದರಿಂದ ಮಾನ್ಯ ಸದಸ್ಯರೂ ಇದರಲ್ಲಿ ನಂಬಿಕೆ ಇಟ್ಟುಕೊಳ್ಳಬೇಕೆಂದು ಕಳಕಳಿಯಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ವಿಚಾರಣೆಯನ್ನು ಸರಕಾರದವರು ಮಾಡಿರುವುದರಿಂದ ಅದರ ಬಗ್ಗೆ ಮಾನ್ಯ ಸದಸ್ಯರಿಂದ ನೇರವಾಗಿ ಹೇಳಿಕೆಯನ್ನು ಏಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ವಿಚಾರಣೆ ಮಾಡಿದಾಗ ಅವರು ಹೇಳಿರತಕ್ಕ ಆಪಾದನೆಗಳು ಯಾವುದೂ ಇಲ್ಲದುದರಿಂದ ಅವರ ಹೇಳಿಕೆ ಪಡೆಯಲಿಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆಯಾಯಿತು.

QUESTION FOR ANSWERS ON THE DAY
(BUT NOT TAKEN UP)

TRANSFER OF TEACHERS AND CLERKS WORKING IN EDUCATION DEPARTMENT AT MYSORE CITY

(256) SRI K. SIDDAIAH (Santhemarahalli).—

Will the Minister for Education be pleased to state :—

(*a*) the number of teachers and clerks who have put in a service of (i) above five years and below 10 years, (ii) above 10 years and below 15 years, and (iii) above 15 years in Education Department at Mysore City (information may be furnished categorywise) ;

(*b*) the reasons for not transferring the employees who have put in more than 10 years of service

SRI A. R. BADARINARAYANA (Minister for Education)

(*a*)	Teachers	Clerks
(i) above 5 years and below 10 years	12	3 (Collegiate Education.)
	219	20 (Deptt. of Public Instruction.)
	5	3 (Technical Education.)
	236	26